- ವಿಶ್ವದಾದ್ಯಂತ 5ರಿಂದ 15 ವಯೋಮಾನದ ಶೇ. 6ರಷ್ಟು ಮಕ್ಕಳು ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ.
- ಭಾರತದ ಒಟ್ಟು ಅಂಗವಿಕಲ ಜನಸಂಖ್ಯೆಯಲ್ಲಿ ಶೇ. 54.52 ಜನ ಶಿಕ್ಷಣ ಪಡೆದಿದ್ದಾರೆ. ನಮ್ಮಲ್ಲಿರುವ ಒಟ್ಟು ಅವಿದ್ಯಾವಂತ ಅಂಗವಿಕಲರ ಸಂಖ್ಯೆ 1.22 ಕೋಟಿ.



ಮುಗಿದು ಏಳು ವರ್ಷಗಳಾಗಿವೆ. ಆದರೂ ಸಮಸ್ಯೆ ಬಗೆಹರಿದಿಲ್ಲ. ಮೊದಲೇ ಅಂಗವೈಕಲ್ಯದಿಂದ ನೊಂದಿರುವ ಮನಸ್ಸುಗಳಿಗೆ ಸರ್ಕಾರದ ಇಂಥ ನಡೆಯಿಂದ ಇನ್ನಷ್ಟು ಗಾಸಿಯಾಗುತ್ತಿದೆ.

ಎರಡು ವರ್ಷಗಳ ಹಿಂದೆ ಸೇವೆಗೆ ನೇಮಕವಾದ ಮಹಿಳಾ ಅಭ್ಯರ್ಥಿಯೊಬ್ಬರು, 'ತರಬೇತಿ ಮತ್ತು ನೇಮಕಾತಿ ವಿಭಾಗವು ಕೆಲಸಕ್ಕೆ ಬೇಕಾದ ದೈಹಿಕ ಮಾನದಂಡಗಳಾಗಲೀ, ಕೆಲಸ ಮಾಡುವ ಕ್ಷಮತೆಯಾಗಲೀ ಇಲ್ಲ ಎಂದು ಕಾರಣ ನೀಡಿ ನನಗೆ ಹುದ್ದೆ ನಿರಾಕರಿಸಿದೆ. ನನ್ನ ಮೆರಿಟ್‌ಗೆ ಏನೂ ಬೆಲೆ ಇಲ್ಲದಂತಾಗಿದೆ' ಎಂದು ದುಃಖಿಸುತ್ತಾ, 'ಕೈಕಾಲುಗಳ ನ್ಯೂನತೆಯ ವ್ಯಾಖ್ಯೆ ತುಂಬಾ ದೊಡ್ಡದಿದೆ. ಉದಾಹರಣೆಗೆ, ವ್ಯಕ್ತಿಯ ಕಾಲು ಅಲ್ಪ ಪ್ರಮಾಣದಲ್ಲಿ ಊನವಾಗಿದ್ದು ಆತನಿಗೆ ಇತರರಂತೆ ಓಡಲು ಹಾರಲು ಸಾಧ್ಯವಾಗದಿರಬಹುದು. ಆದರೆ ನಡೆಯಲು ನಿಲ್ಲಲು ಯಾವುದೇ ಸಮಸ್ಯೆ ಇರುವುದಿಲ್ಲ. ನೋಡುವುದು, ಕೇಳಿಸಿಕೊಳ್ಳುವುದು ಮತ್ತು ಮಾತನಾಡುವುದು ಸಾಧ್ಯವಿರುವಾಗ ಅದನ್ನು ಪರಿಗಣಿಸಬೇಕಲ್ಲವೇ' ಎಂದು ಪ್ರಶ್ನಿಸುತ್ತಾರೆ.

ಯಾವುದೇ ಇಲಾಖೆಗೆ ಅಭ್ಯರ್ಥಿಯನ್ನು ನೇಮಕ ಮಾಡಿಕೊಳ್ಳುವ ಅಂತಿಮ ಅಧಿಕಾರವು ಸಂಬಂಧಿಸಿದ ನಿಗಮ ಮಂಡಳಿಗಳಿಗೆ ಇರುತ್ತದೆ. 2015ರವರೆಗೆ ಕಾಲು ಮತ್ತು ಕೈ ವೈಕಲ್ಯ ಇರುವ ಅಭ್ಯರ್ಥಿಗಳನ್ನು 'ಭಾರತೀಯ ನಾಗರಿಕ ಲೆಕ್ಕ ಇಲಾಖೆ'ಯು ಗ್ರೂಪ್ ಎ ಶ್ರೇಣಿ ಮತ್ತು ಪುದುಚೇರಿಯ ಗ್ರೂಪ್ ಬಿ ಹುದ್ದೆಗಳಿಗೆ ನೇಮಕ ಮಾಡುತ್ತಿರಲಿಲ್ಲ. ಈಗ ನಿರ್ಬಂಧ ತೆರವಾಗಿದೆಯಾದರೂ ಅನುಷ್ಠಾನ ಅಷ್ಟು ಸುಲಭವಲ್ಲ. ಕೀಲು, ಮೂಳೆಗಳ ನ್ಯೂನತೆ ಇರುವವರು ನಾಗರಿಕ ಸೇವಾ ವಿಭಾಗದ ಕೇವಲ ಆರು ಹುದ್ದೆಗಳಿಗೆ ಅರ್ಹರು, ಉಳಿದವುಗಳಿಗೆ ಇಲ್ಲ ಎಂಬ ಭಾವನೆ ಆಯ್ಕೆದಾರರಲ್ಲಿದೆ.

ಮೆರಿಟ್ ಆಧಾರದಲ್ಲಿ ಪರೀಕ್ಷೆ ನಡೆಸಿ ದೈಹಿಕ ಲಕ್ಷಣಗಳನ್ನಾಧರಿಸಿ ಹುದ್ದೆ ನೀಡುತ್ತೇವೆ ಎನ್ನುವುದೇ ಅಸಾಂವಿಧಾನಿಕ. 2016ರ ಅಂಗವಿಕಲರ ಹಕ್ಕುಗಳ ನೇರ ಉಲ್ಲಂಘನೆಯಾಗುತ್ತದೆ ಎಂಬುದು ತಜ್ಞರ ಮಾತು.

ದೈಹಿಕ ನ್ಯೂನತೆ ಇರುವ ಆಟಗಾರರು ಪ್ಯಾರಾಲಿಂಪಿಕ್ ಕೂಟದಲ್ಲಿ ಚಿನ್ನದ ಪದಕ ಗಳಿಸಿದರೆ ನಮಗೇ ಪದಕ ಸಿಕ್ಕಂತೆ ಸಂಭ್ರಮಿಸುತ್ತೇವೆ. ಪ್ರೇರಣೆದಾಯಕ ಭಾಷಣ ಮಾಡುವಾಗ ಅವರ ಉದಾಹರಣೆ ನೀಡುತ್ತೇವೆ. ದೇಶದ ಅತ್ಯುನ್ನತ ಪದ್ಮ ಪ್ರಶಸ್ತಿ ನೀಡುತ್ತೇವೆ. ಆದರೆ, ಅವರೇ ಪರೀಕ್ಷೆ ಬರೆದು ಗಳಿಸಿದ ಅಂಕಗಳಿಗೆ ದೈಹಿಕ ನ್ಯೂನತೆಯ ಆಧಾರದಲ್ಲಿ ವಿಚಿತ್ರ ನಿಬಂಧನೆಗಳನ್ನು ಮುಂದು ಮಾಡಿ ನೇಮಕಾತಿ ನಿರಾಕರಿಸುತ್ತೇವೆ. ಇಂಥ ಆಷಾಢಭೂತಿತನಕ್ಕೆ ಪರಿಹಾರ ಇಲ್ಲವೇ?

## ಅಂಗವೈಕಲ್ಯದ ವಿಧಗಳು

ಅಂಗವೈಕಲ್ಯದಲ್ಲಿ ಎರಡು ವಿಧ. ಒಂದು, ಕಣ್ಣಿಗೆ ಕಾಣುವ ಅಂಗವೈಕಲ್ಯ. ಎರಡನೆಯದು, ಕಣ್ಣಿಗೆ ಗೋಚರಿಸದ ಅಂಗವೈಕಲ್ಯ.

ಕುರುಡುತನ, ಕಿವುಡುತನ, ಬೆನ್ನುಮೂಳೆ ಸಮಸ್ಯೆ, ಕುಬ್ಜತನಗಳೆಲ್ಲ ನೋಡಿದ ತಕ್ಷಣ ಅರಿವಿಗೆ ಬರುವ ವೈಕಲ್ಯಗಳೆನಿಸಿವೆ. ಇನ್ನೂ ಕೆಲವು ಮೇಲ್ನೋಟಕ್ಕೆ ಕಾಣಿಸದೆ, ದೇಹದೊಳಗಿನ ಭಾಗಗಳಾದ ಮೆದುಳು, ನರಮಂಡಲ ವ್ಯವಸ್ಥೆ, ರಕ್ತ ಪರಿಚಲನೆ, ಹೆಪ್ಪುಗಟ್ಟುವಿಕೆಗಳಿಗೆ ಸಂಬಂಧಿಸಿದ್ದಾಗಿವೆ.

ವೈಕಲ್ಯಗಳು ಮಾನಸಿಕ ಮತ್ತು ದೈಹಿಕ ಎರಡೂ

- ರಾಜ್ಯಗಳ ಪೈಕಿ ಸಿಕ್ಕಿಂನಲ್ಲಿ ಅತಿ ಹೆಚ್ಚು ಅಂಗವಿಕಲರಿದ್ದಾರೆ (ಆ ರಾಜ್ಯದ ಜನಸಂಖ್ಯೆಯ ಶೇ. 2.98ರಷ್ಟು).
- ಮಿಜೋರಾಂ ರಾಜ್ಯದಲ್ಲಿ ಅತಿ ಕಡಿಮೆ, ಅಂದರೆ ಅಲ್ಲಿನ ಜನಸಂಖ್ಯೆಯ ಶೇ. 1.38ರಷ್ಟು ಜನ ಅಂಗವಿಕಲರಿದ್ದಾರೆ.
- ದೊಡ್ಡ ಜನಸಂಖ್ಯೆಯ ರಾಜ್ಯಗಳ ಪೈಕಿ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು, ಅಂದರೆ ಅಲ್ಲಿನ ಜನಸಂಖ್ಯೆಯ ಶೇ. 15.5 ಜನ ಅಂಗವಿಕಲರಾಗಿದ್ದಾರೆ.
- ದೇಶದಲ್ಲೇ ಅತಿ ಹೆಚ್ಚು ಅಂಗವಿಕಲ ಮಕ್ಕಳನ್ನು (ಆರು ವರ್ಷ ವಯೋಮಾನದೊಳಗಿನ) ಹೊಂದಿರುವ ರಾಜ್ಯ ಉತ್ತರ ಪ್ರದೇಶ.

ಬಗೆಯಲ್ಲಿ ಇರುತ್ತವೆ. ಬೆಳವಣಿಗೆ ವಿಳಂಬ, ಕಲಿಕೆಯಲ್ಲಿ ನ್ಯೂನತೆಗಳಿಂದ ಹೆಚ್ಚಿನ ಸಂಖ್ಯೆಯ ಜನ ಬಳಲುತ್ತಿರುವುದು ವರದಿಯಾಗಿದೆ. ಸಾಮಾನ್ಯ ವೈಕಲ್ಯಗಳನ್ನು ಹೊರತುಪಡಿಸಿ ಇತರೆ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

### 1. ಗಮನ ಕೊರತೆ (ಎಡಿ.ಎಚ್‌.ಡಿ. - ಹೈಪರ್ ಆಕ್ಟಿವಿಟಿ ಡಿಸಾರ್ಡರ್)

ಇದು ಕೇಂದ್ರ ನರವ್ಯೂಹಕ್ಕೆ ಸಂಬಂಧಿಸಿದ ಅಂಗವೈಕಲ್ಯ. ಇದರಿಂದ ಬಳಲುವ ವ್ಯಕ್ತಿಯಲ್ಲಿ ಅಜಾಗರೂಕತೆ, ಹಠಾತ್ ಪ್ರತಿಕ್ರಿಯಿಸುವ ಪ್ರವೃತ್ತಿ, ಒಂದು ಜಾಗದಲ್ಲಿ ನಿಲ್ಲಲು ಕುಳಿತುಕೊಳ್ಳಲು ಆಗದಿರುವುದು, ಕಳಪೆ ನಿಯಂತ್ರಣ ಮತ್ತು ಕೆಲಸ ಮಾಡುವ ಜಾಗ, ಮನೆ, ಶಾಲೆಗಳಲ್ಲಿ ನಿಯಂತ್ರಣ ತಪ್ಪಿ ವರ್ತಿಸುವುದು ಇದರ ಲಕ್ಷಣಗಳು.

### 2. ಕುರುಡು (ದೃಷ್ಟಿದೋಷ)

ದೃಷ್ಟಿಹೀನತೆಯು ವ್ಯಕ್ತಿಯ ದೃಷ್ಟಿ ಅಥವಾ ದೃಷ್ಟಿ



ರಸ್ತೆ ಬದಿಯ ಗೋಡೆಯ ಮೇಲೆ ಪರಿಸರ ಜಾಗೃತಿ ಚಿತ್ರ ಬಿಡಿಸುತ್ತಿರುವ ಬಸವರಾಜ ಐಹೊಳೆ ಕಲೆಯ ಮೂಲಕ ತಮ್ಮ ಅಂಗವೈಕಲ್ಯ ಮೀರಿರುವ ಆತ್ಮವಿಶ್ವಾಸಿ.